ಪರಿಗಣಿಸಲಾಗುವುದು. ಯೋಜನೆಯ ಕಾಮಗಾರಿಯನ್ನು 2-01-2003 ರಂದು ಚಾಲನೆಗೊಳಿಸಲಾಯಿತು. ಹಾಗೂ ದಿನಾಂಕ: 01-10-2003 ರಂದು ಮುಕ್ತಾಯಗೊಳಿಸಲಾಗುವುದು.

ಇ) ಕಡಿಮೆ ಆದಾಯ ವರ್ಗದ ಮನೆಗೆ ರೂ. 3,23,452.00 ರಿಂದ 4,11,188.00 ರವರೆಗೆ ಹಾಗೂ ಮಧ್ಯಮ ಆದಾಯ ವರ್ಗದ ಮನೆಗೆ ರೂ. 5,07,264.00 ರಿಂದ 5,37,473.00 ರವರೆಗೆ ನಿಗಧಿಪಡಿಸಲಾಗಿದೆ. ಮೂಲೆ ನಿವೇಶನಗಳ ಮಾರಾಟದ ಬೆಲೆಯನ್ನು ಹರಾಜು ಮಾರಾಟದ ಮೂಲಕ ನಿಗಧಿಪಡಿಸಬೇಕಾಗಿರುವುದರಿಂದ ಲಭ್ಯವಿರುವ 43 ಮೂಲೆ ನಿವೇಶನಗಳ ಬೆಲೆಯನ್ನು ಇನ್ನೂ ನಿಗಧಿಪಡಿಸಿರುವುದಿಲ್ಲ. ಇದುವರೆಗೆ ವಿವಿಧ ವರ್ಗಗಳ ನಿವೇಶನ/ಮನೆಗಳಿಗೆ ಬಂದಿರುವ ಅರ್ಜಿಗಳು ಒಟ್ಟು 322 ನಿವೇಶನ/ಮನೆಗಳ ಹಂಚಿಕೆಯನ್ನು ಕರ್ನಾಟಕ ಗೃಹ ಮಂಡಳಿಯ ಹಂಚಿಕೆ ನಿಯಮಾವಳಿ ಪ್ರಕಾರ ಮಾಡಲಾಗುವುದು.

ಈ) ಇಲ್ಲ.

ಉ) ಬೇರೆ ಸ್ಥಳದಿಂದ ಈ ಸ್ಥಳಕ್ಕೆ ಅರ್ಜಿಗಳು ಬದಲಾವಣೆಗೆ ಹಾಗೂ ನಿವೇಶನದಿಂದ ಮನೆಗೆ ಬದಲಾವಣೆಯನ್ನು ಅರ್ಜಿದಾರರು ಇಚ್ಛಿಸಿದಲ್ಲಿ ಬದಲಾಯಿಸಿಕೊಳ್ಳುವ ಅವಕಾಶವನ್ನು ಕಲ್ಪಿಸಲಾಗಿದೆ. ಅರ್ಜಿದಾರರು ಇಷ್ಟಪಟ್ಟಲ್ಲಿ ನಿವೇಶನದಿಂದ ಮನೆಗೆ ತಮ್ಮ ನೋಂದಣಿಯನ್ನು, ಲಿಖಿತ ಅರ್ಜಿಯ ಮೂಲಕ ಗೃಹ ಮಂಡಳಿಗೆ ಸಲ್ಲಿಸಿ, ತಮ್ಮ ನೋಂದಣಿಯನ್ನು ಇಷ್ಟದಂತೆ ಬದಲಾಯಿಸಿಕೊಳ್ಳಬಹುದಾಗಿದೆ. ಲಭ್ಯತೆಯ ಆಧಾರದ ಮೇಲೆ ನಿಯಮಾನುಸಾರ ಹಂಚಿಕೆಗೆ ಅಂತಹ ಅರ್ಜಿಗಳನ್ನು ಪರಿಗಣಿಸಲಾಗುವುದು.

ಯಶವಂತಪುರ ಹೋಬಳಿ ಅಬ್ಬಿಗೆರೆ ಗ್ರಾಮ ಪಂಚಾಯ್ತಿಯ ಸರ್ವೆ ನಂ. 11 ರಲ್ಲಿ ಸುಳ್ಳುದಾಖಲೆ ಸೃಷ್ಟಿಸಿ ಖಾತೆ ಮಾಡಿರುವುದು

1989(2543) ಶ್ರೀ ಅಶೋಕ್.ಆರ್.(ಉತ್ತರಹಳ್ಳಿ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ ಅಬ್ಬಿಗೆರೆ ಗ್ರಾಮ ಪಂಚಾಯ್ತಿಯ ಸರ್ವೆ ನಂ.11 ರಲ್ಲಿ ಸುಳ್ಳು ದಾಖಲೆ ಸೃಷ್ಟಿ ಮಾಡಿ ರೆವಿನ್ಯೂ ಜಾಗವನ್ನು ಗ್ರಾಮಠಾಣಾ ಖಾತೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹೀಗೆ ಸುಳ್ಳು ದಾಖಲೆ ನೀಡಿ ಖಾತಾ ಮಾಡಿಕೊಂಡಿರುವ ಹೆಸರುಗಳೇನು;

ಇ) ಖಾತಾ ಮಾಡಿರುವ ಅಧಿಕಾರಿಯ ಮೇಲೆ ಸರ್ಕಾರ ಕೈಗೊಂಡಿರುವ ಕಾನೂನು ಕ್ರಮವೇನು?

ಶ್ರೀ ಎಂ.ವೈ. ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) ಇಲ್ಲ

ಆ) ಅನ್ವಯಿಸುವುದಿಲ್ಲ

ಇ) ಅನ್ವಯಿಸುವುದಿಲ್ಲ

ಮಂಡ್ಯ ನಗರದಲ್ಲಿನ ಕೊಳಚೆ ಪ್ರದೇಶದ ನಿವಾಸಿಗಳಿಗೆ ನಿವೇಶನದ ಹಕ್ಕುಪತ್ರ ವಿತರಣೆ

1990(2548) ಶ್ರೀ ಆತ್ಮಾನಂದ ಎಂ.ಎಸ್.(ಮಂಡ್ಯ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?